

ಡೆನ್ಮಾರ್ಕ್‌ನಿಂದ ಬಂದ ಸೈನೆಜಾಸನ್ ದಂಪತಿ ಮಕ್ಕಳಾದ ಇನಿಯ ಹಾಗೂ ಟೋಕಿ ಜತೆಗೆ. ಚಿತ್ರ: ಬಿ.ಹೆಚ್. ಶಿವಕುಮಾರ್

# ಎಲ್ಲೆಲ್ಲೂ ಸೌಂದರ್ಯವೆ..!

ಸೈನೆ ಬೋಕ್ಕೈರ್ ಡೆನ್ಮಾರ್ಕ್ ನ ಕೋಪೆನ್‌ಹೇಗನ್ ನಿಂದ ಉದ್ಯೋಗ ನಿಮಿತ್ತ ನಮ್ಮ ನಾಡಿಗೆ ಬಂದವರು. ಹಾಗೆ ನೋಡಿದರೆ ಸೈನೆ 1986 ರಲ್ಲಿ ಒಮ್ಮೆ ಭಾರತಕ್ಕೆ ಬಂದು ಕೆಲ ಕಾಲ ಇದ್ದು ವಾಪಸ್ ಆದವರು. ಮತ್ತೆ 1994ರಲ್ಲಿಯೂ ಕೆಲಸದ ನೆಪದಲ್ಲಿ ಬಂದಿದ್ದರು. ಮೂರನೆ ಬಾರಿಗೆ 2014 ರಲ್ಲಿ ಕುಟುಂಬ ಸಮೇತ ಬೆಂಗಳೂರಿಗೆ ಬಂದು ಇಲ್ಲೇ ನೆಲೆ ನಿಂತಿದ್ದಾರೆ. ಪತಿ ಜಾಸನ್ ನ್ಯೂಜಿಲಂಡ್‌ನವರು. ಮಕ್ಕಳಾದ ಇನಿಯ ಮತ್ತು ಟೋಕಿ ಇಬ್ಬರೂ ಜತೆಗಿದ್ದಾರೆ.

'ಭಾರತ ಎಂದರೆ ಬಹಳ ಇಷ್ಟ. ಪತಿ ಜಾಸನ್ ಅವರಿಗೂ ಇಂಡಿಯಾ ಎಂದರೆ ಇಷ್ಟ. ಹೀಗಾಗಿ ಮಗಳಿಗೆ ಇನಿಯ ಎಂಬ ಹೆಸರಿಟ್ಟಿದ್ದೇವೆ. ಇನಿಯ ಎಂದರೆ ನ್ಯೂಜಿಲಂಡ್ ಭಾಷೆಯಲ್ಲಿ ಇಂಡಿಯಾ ಎಂದು ಅರ್ಥ' ಎಂದು ಹೇಳುತ್ತಾರೆ ಸೈನೆ.

ಸೈನೆ ಆಗಾಗ ವೃತ್ತಿ ನಿಮಿತ್ತ ಭಾರತಕ್ಕೆ, ಬೆಂಗಳೂರಿಗೆ ಬಂದು ಹೋಗುತ್ತಿದ್ದುದರಿಂದ ಅವರಿಗೆ ಇಲ್ಲಿನ ಸಂಸ್ಕೃತಿ ಎಲ್ಲವೂ ಪರಿಚಿತವೇ ಅಂತೆ. ಭಾರತ ವೇಗವಾಗಿ ಅಭಿವೃದ್ಧಿ ಹೊಂದುತ್ತಿರುವ ದೇಶ ಎಂದು ವಿಶ್ವ ಭೂಪಟದಲ್ಲಿ ಗುರುತಿಸಿಕೊಂಡಿದೆ ಎಂಬ ಹೆಮ್ಮೆ ಇವರಿಗಿದೆಯಂತೆ.

'ಬೆಂಗಳೂರು ಅಂತೂ ಅಭೂತಪೂರ್ವ ಬದಲಾವಣೆ, ಅಭಿವೃದ್ಧಿ, ಬೆಳವಣಿಗೆ ಕಂಡಿದೆ. ಕಳೆದ 30 ವರ್ಷಗಳ ಹಿಂದೆ ಬೆಂಗಳೂರಿಗೆ ಬಂದು ಕೆಲ ಕಾಲ ತಂಗಿದ್ದೆ. ಅಂದಿಗೂ ಇಂದಿಗೂ ಬೆಂಗಳೂರನ್ನು ಹೋಲಿಕೆ ಮಾಡುವಂತೆಯೇ ಇಲ್ಲ. ಮಾಹಿತಿ ತಂತ್ರಜ್ಞಾನದ ಫಲವಾಗಿ ಬಂದ ಐಟಿ ಕಂಪೆನಿಗಳಿಂದಾಗಿ ಬೆಂಗಳೂರು ತನ್ನ ಸ್ವರೂಪವನ್ನೇ ಸಂಪೂರ್ಣ ಬದಲಾಯಿಸಿಕೊಂಡಿದೆ. ಆಧುನಿಕತೆಯ ಸ್ಪರ್ಶ ಇಲ್ಲಿಗೆ ಎಡತಾಕಿದೆ. ದೇಶ ವಿದೇಶಗಳಿಂದ ಬಂಡವಾಳ ಹೂಡಿಕೆಗಾಗಿ ಉದ್ಯಮಿಗಳು ಬಂದು ತಳ ಊರಿದ್ದಾರೆ. ವಿದೇಶೀಯರು ಬಂದು ಉದ್ಯಮ, ಉದ್ಯೋಗಗಳಲ್ಲಿ ತೊಡಗಿಕೊಂಡಿದ್ದಾರೆ. ಇಂಥ ಕ್ಷಿಪ್ರ ಬೆಳವಣಿಗೆ ಬಹುಶಃ ಯಾವ ದೇಶದಲ್ಲೂ ಆಗಿಲ್ಲ ಎಂಬುದು ನನ್ನ ಭಾವನೆ' ಎನ್ನುತ್ತಾರೆ ಸೈನೆ.

'ಇಲ್ಲಿನವರು ಬಹಳ ಶ್ರದ್ಧೆಯಿಂದ, ವೃತ್ತಿ ಮೇಲಿನ ಪ್ರೀತಿಯಿಂದ ಕೆಲಸ ಮಾಡುತ್ತಾರೆ. ಪ್ರತಿಭಾವಂತರಾದ ಇಲ್ಲಿನ ಜನ ಸ್ನೇಹಜೀವಿಗಳೂ ಹೌದು'.

'ಸೈಕ್ಲಿಂಗ್ ಮಾಡುವುದು ಬಹಳ ಇಷ್ಟ. ಕೋಪೆನ್‌ಹೇಗನ್‌ನಲ್ಲಿ ಸೈಕ್ಲಿಂಗ್ ಸಾಮಾನ್ಯವಾಗಿ ಎಲ್ಲರ ಹವ್ಯಾಸವೂ ಹೌದು. ಆದರೆ ಬೆಂಗಳೂರಿನಲ್ಲಿ ಸೈಕ್ಲಿಂಗ್ ಅನ್ನು ಕಲ್ಪಿಸಿಕೊಳ್ಳಲೂ ಸಾಧ್ಯವಿಲ್ಲ. ಇಲ್ಲಿ ಬೈಕ್‌ನಲ್ಲಿ ಹೋಗುವುದು ಕೂಡ ಸುರಕ್ಷಿತವಲ್ಲ. ಟ್ರಾಫಿಕ್ ಅಂತೂ ವಿಪರೀತ. ಹೀಗಾಗಿ ನಗರದಲ್ಲಿ ಸುತ್ತಾಡುವುದು ಕಿರಿಕಿರಿ ಆಗುತ್ತದೆ. ಆದರೆ ಡೆನ್ಮಾರ್ಕ್‌ನಲ್ಲಿ ಈ ಪರಿಸ್ಥಿತಿ ಇಲ್ಲ. ಅಲ್ಲಿ ಟ್ರಾಫಿಕ್ ಹಾವಳಿ ಇಲ್ಲವೇ ಇಲ್ಲ ಎಂದು ತುಲನಾತ್ಮಕವಾಗಿ ವಿವರಿಸುತ್ತಾರೆ' ಅವರು.

### ಸೌಂದರ್ಯ ಎಲ್ಲಿಲ್ಲ..?

'ಸೌಂದರ್ಯ ಎಂಬ ಪರಿಕಲ್ಪನೆಗೆ ವಿಭಿನ್ನ ಅರ್ಥಗಳಿವೆ. ಇಲ್ಲಿ ಎಲ್ಲೆಲ್ಲೂ ಸೌಂದರ್ಯವಿದೆ. ಶಾಲಾ ಮಕ್ಕಳ ಮುಖದಲ್ಲಿ ಅರಳುವ ಹೂ ನಗೆ ಚಂದ; ಜನರು ಆಚರಿಸುವ ಹಬ್ಬಗಳು ಚಂದ; ಬೆಳಿಗ್ಗೆ ಎದ್ದ ಕೂಡಲೇ ಮನೆ ಮುಂದೆ ನೀರು ಹಾಕಿ ರಂಗೋಲಿ ಹಾಕುವ ಕ್ರಮ, ಪೂಜೆ ಪುನಸ್ಕಾರದ ಸಂಸ್ಕಾರ, ಆಹಾರ ಸಂಸ್ಕೃತಿ, ಹಿರಿಯರಿಗೆ ಕೊಡುವ ಗೌರವ, ಎಲ್ಲರೊಂದಿಗೆ ಬೆರೆಯುವ ಪದ್ಧತಿ ಎಲ್ಲವೂ ಸೌಂದರ್ಯವೇ. ನಮಗೆ ಹೊಸದು ಅಷ್ಟೇ ಅಲ್ಲ ಅನುಕರಣೀಯವೂ ಹೌದು. ಇದಕ್ಕಾಗಿಯೇ ವಿದೇಶೀಯರು ಇಲ್ಲಿ ಬಂದು ಖಾಯಂ ಆಗಿ ನೆಲೆ ನಿಲ್ಲಲು ಇಷ್ಟಪಡುವುದು, ಬೆಂಗಳೂರು ಹೆಚ್ಚು ಹೆಚ್ಚು ವಿದೇಶೀಯರನ್ನು ಸೆಳೆಯುವುದು' ಇದು ಸೈನೆ ಅವರ ವಿಶ್ಲೇಷಣೆ.

'ಹೋಟೆಲ್‌ಗಳಲ್ಲಿ ದೋಸೆ ತಿನ್ನುವುದು ಇಷ್ಟ. ಇನಿಯ ಕ್ರಿಸ್ಪಿ ಅವಕಾಡೊ ಇಷ್ಟಪಡುತ್ತಾಳೆ. ಅದೂ ಯುಬಿ ಸಿಟಿಯಲ್ಲಿ. 'ಚುಂಗ್ ವಾ' ರೆಸ್ಟೊರೆಂಟ್‌ಗಳು ರುಚಿಕರ ಖಾದ್ಯ ಕೊಡುತ್ತವೆ. ವಾರಾಂತ್ಯದಲ್ಲಿ ಖಾಯಂ ಹೋಟೆಲ್ ಊಟ ತಿಂಡಿಯೇ. ಜ್ಯೂಸಿ ಟೊಮ್ಯಾಟೊ ದಿನಾ ಬಳಸುತ್ತೇವೆ. ಇದು ತ್ವಚೆಗೆ ಹೊಳಪು ನೀಡುತ್ತದೆ ಎಂಬುದನ್ನು ಬಲ್ಲೆ. ವೆಜ್ ಊಟವೂ ಇಷ್ಟವೇ. ಒಟ್ಟಿನಲ್ಲಿ ಬೆಂಗಳೂರು ವಿದೇಶೀಯರಿಗೆ ಸ್ವರ್ಗ'.

★ ಅವನೀಶ್